ಹೋಗುತ್ತಿತ್ತು, ಧಾನ್ಯ ತುಂಬಿದ ಅನೇಕ ಗಾಡಿಗಳು ಅಲ್ಲಿ ಸಾಗುತ್ತಿರುವುದನ್ನು ಆ ಗಿಳಿ ನೋಡಿತು. ಆ ಗಾಡಿಗಳಿಂದ ಸ್ವಲ್ಪ ಧಾನ್ಯದ ಕಾಳುಗಳು ರಸ್ತೆಯ ಮೇಲೆ ಬೀಳುತ್ತಿರುವುದನ್ನೂ ಸಹ ಆ ಗಿಳಿ ನೋಡಿತು. ನಾವುಗಳು ಒಂದೊಂದು ಕಾಳಿಗೂ ಒದ್ದಾಡುತ್ತಿದ್ದೇವೆ. ಆದರೆ ಇಲ್ಲಿ ಬಹಳಷ್ಟು ಧಾನ್ಯ ಚೆಲ್ಲಾಡುತ್ತಿವೆ ಎಂದು ಗಿಳಿ ಅಂದುಕೊಂಡಿತು. ತಾನು ಇದನ್ನು ಮೊದಲು ಹುಡುಕಿದ್ದೇನೆ. ಆದ್ದರಿಂದ ನನ್ನ ಜೊತೆಗಾರರ್ಯಾರಿಗೂ ಈ ವಿಷಯ ತಿಳಿಸಬಾರದು. ನಾನು ಸ್ವತಃ ಈ ಕಾಳುಗಳನ್ನು ಒಟ್ಟುಗೂಡಿಸಿಕೊಂಡು ಇಟ್ಟುಕೊಳ್ಳುತ್ತೇನೆಂದು ಆ ಗಿಳಿ ನಿರ್ಧರಿಸಿತು. ಅನಂತರ ಅದು ರಾತ್ರಿಯ ಹೊತ್ತಿಗೆ ತನ್ನ ಜೊತೆಗಾರರ ಬಳಿಗೆ ತಲುಪಿತು.

ಎಲ್ಲಾ ಗಿಳಿಗಳು ಆ ಗಿಳಿಯನ್ನೇ ಪ್ರತೀಕ್ಷೆ ಮಾಡುತ್ತಾ ಕುಳಿತಿದ್ದವು. ಅದನ್ನು ಕಂಡ ಒಂದು ಗಿಳಿ "ಅರೆ, ನೀನು ಒಂಟಿಯಾಗಿ ಎಲ್ಲಿಗೆ ಹೋಗಿದ್ದೆ?" ಎಂದು ಕೇಳಿತು ಅದರ ಮಾತಿಗೆ ಬುದ್ಧಿವಂತ ಗಿಳಿ "ಇಲ್ಲೇ ಸುಮ್ಮನೆ ಅಡ್ಡಾಡಲು ಹೋಗಿದ್ದೆ" ಎಂದು ಸುಳ್ಳು ಹೇಳಿತು. "ನೀನು ಏನೋ ನಮ್ಮಿಂದ ಮುಚ್ಚಿಡುತ್ತಿರುವೆ" ಎಂದಿತು ಆ ಗಿಳಿ. "ಅಯ್ಯೋ, ನಾನೇನು ಮುಚ್ಚಿಡಲಿ?" ಎಂದಿತು ಬುದ್ಧಿವಂತ ಗಿಳಿ. "ಹಾಗಿದ್ದರೆ ನೀನು ಎಲ್ಲಿಗೆ ಹೋಗಿದ್ದೆಯೆಂದು ನಿಜ ಹೇಳು" ಎಂದು ಆ ಗಿಳಿ ಕೇಳಿತು. ಆಗ ಬುದ್ಧಿವಂತ ಗಿಳಿಯು ನೀನೊಳ್ಳೆ ನನ್ನ ಮೇಲೆ ಅನುಮಾನಪಡುವೆಯಲ್ಲಾ, ಸರಿ ಹೇಳ್ತೀನಿ ಕೇಳು, ನಾನು ಎದುರು ಕಾಣುವ ಕಾಡಿಗೆ ಏನಾದ್ರೂ ಆಹಾರ ದೊರೆಯುತ್ತೇನೋಂತ ಹೋಗಿದ್ದೆ" ಎಂದಿತು. "ಹಾಗಾದ್ರೆ ಏನಾದ್ರೂ ಆಹಾರ ಸಿಕ್ಕಿತೆ?" ಆ ಗಿಳಿ ಕೇಳಿತು. ಅದರ ಮಾತಿಗೆ ಬುದ್ಧಿವಂತ, ಗಿಳಿಯು ಬೇಕಾದಷ್ಟು ಸಿಕ್ಕಿತು, ಆದರೆ ತಿನ್ನಲು ಆಜ್ಞೆ ಆಗಲಿಲ್ಲ" ಎಂದಿತು. "ಏಕೆ?" ಎಂದು ಪ್ರಶ್ನಿಸಿತು ಮತ್ತೊಂದು ಗಿಳಿ. ಅದರ ಮಾತಿಗೆ ಬುದ್ಧಿವಂತ ಗಿಳಿಯು "ಏಕೆಂದರೆ ಆ ಕಾಡಿನಲ್ಲಿ ಬಹಳಷ್ಟು ಜನ ಬೇಟೆಗಾರರು ಅಡ್ಡಾಡುತ್ತಿದ್ದಾರೆ. ಅವರ ಜೊತೆಯಲ್ಲಿ ಅನೇಕ ಪ್ರಾಣಿಗಳೂ ಇವೆ. ನಮಗೆ ಆ ಧಾನ್ಯ ದೊರೆಯುವುದೇ ನೀನೇ ಹೇಳು" ಎಂದಿತು. "ಹೌದು, ವಿಷಯ ಗಂಭೀರವಾಗಿದೆ" ಎಂದು ಹೇಳಿದ ಆ ಗಿಳಿ ಅಷ್ಟಕ್ಕೇ ಸುಮ್ಮನಾಯಿತು...!

ಉಳಿದ ಗಿಳಿಗಳು ನಿರಾಶೆಗೊಂಡವು. ಆದರೆ ಬುದ್ಧಿವಂತ ಗಿಳಿಗೆ ತನ್ನ ಮಾತು ಎಲ್ಲಾ ಗಿಳಿಗಳಿಗೆ ಭಯ ಹುಟ್ಟಿಸಿದೆ ಎಂದು ಖಾತ್ರಿಯಾಗಿತ್ತು. ನಾಳೆಯಿಂದ ತಾನೊಬ್ಬನೇ ಹೋಗಿ ಕಾಡಿನಲ್ಲಿ ಬಿದ್ದಿರುವ ಧಾನ್ಯಗಳನ್ನು ತಂದು ಕೂಡಿಡುತ್ತೇನೆ ಎಂದು ನಿರ್ಧರಿಸಿತು. ಮಳೆಗಾಲ ಪ್ರಾರಂಭವಾಗುತ್ತಲೇ ಎಲ್ಲಾ ಗಿಳಿಗಳೂ ಕಾಳು ಕಾಳಿಗೂ ಒದ್ದಾಡುತ್ತವೆ. ಆದರೆ ತನ್ನ ಬಳಿ ಧಾನ್ಯದ ದೊಡ್ಡ ಭಂಡಾರವೇ ಇರುತ್ತದೆಂದು ಆ ಬುದ್ಧಿವಂತ ಗಿಳಿ ಯೋಚಿಸಿತು. ದುರಾಶೆ ಮತ್ತು ಲೋಭದಿಂದ ಆ ಬುದ್ಧಿವಂತ ಗಿಳಿ ಕುರುಡಾಗಿತು. ಅದು ತನ್ನ ಜೊತೆಗಾರರನ್ನೆಲ್ಲಾ ಬಿಟ್ಟು ಆ ಕಾಡಿನ ರಸ್ತೆಗೆ ಬಂದು ಕುಳಿತಿತ್ತು. ಧಾನ್ಯಗಳ ತುಂಬಿದ ಗಾಡಿಗಳು ಬರುತ್ತಲೇ ಅದು ಮೂಟೆಯನ್ನು ತನ್ನ ಕೊಕ್ಕಿನಿಂದ ತೂತು ಮಾಡುತ್ತಿತ್ತು. ಆ ಮೂಟೆಗಳಿಂದ ಧಾನ್ಯದ ಕಾಳುಗಳು ರಸ್ತೆಗೆ ಬೀಳುತ್ತಿದ್ದವು. ಆ ಕಾಳುಗಳನ್ನು ಎತ್ತಿಕೊಂಡು ಹೋಗಿ ಪಕ್ಕದಲ್ಲೇ ಮರದ ಮೇಲಿದ್ದ ಗೂಡೊಂದರಲ್ಲಿ ಶೇಖರಣೆ ಮಾಡುತ್ತಿತ್ತು. ಈ ಗಿಳಿ ರಸ್ತೆಯಲ್ಲಿ ಬಿದ್ದಿದ್ದ ಕಾಳುಗಳನ್ನು ಎತ್ತಿಕೊಳ್ಳುವ ಸಮಯದಲ್ಲಿ ಹಿಂದಿನಿಂದ ಬೇಕಾದಷ್ಟು ಗಾಡಿಗಳು ಬರುತ್ತಿವೆ,

sumashri.com

ತಾನು ಅದರ ಚಕ್ರಗಳ ಅಡಿಯಲ್ಲಿ ಸಿಕ್ಕಿಕೊಂಡು ಸಾಯುತ್ತೇನೆಂಬ ವಿಷಯವನ್ನು ಮರೆತುಬಿಟ್ಟಿತ್ತು. ಅದರ ಗುರಿ ಕೇವಲ ಧಾನ್ಯವನ್ನು ಹೆಚ್ಚಾಗಿ ಸಂಗ್ರಹ ಮಾಡುವುದೇ ಆಗಿತ್ತು. ಆ ಬುದ್ಧಿವಂತ ಗಿಳಿ ಎಡಬಿಡದೆ ರಸ್ತೆಯಲ್ಲಿ ಬಿದ್ದಿದ್ದ ಕಾಳುಗಳನ್ನು ಎತ್ತಿಕೊಳ್ಳುವುದರಲ್ಲಿ ಮಗ್ನವಾಗಿತ್ತು. ಆಗಲೇ ಹಿಂಬದಿಯಿಂದ ಗಾಡಿಗಳು ಬರುತ್ತಿದ್ದವು, ಲೋಭದಿಂದ ಕುರುಡಾಗಿದ್ದ ಆ ಗಿಳಿಗೆ ಅತ್ತಕಡೆಗೆ ಗಮನವೇ ಇರಲಿಲ್ಲ. ಗಾಡಿ ಅದರ ತಲೆಯ ಸಮೀಪಕ್ಕೆ ಬಂದಾಗಲೂ ಸಹ ಅದಕ್ಕೆ ಗೊತ್ತಾಗಲಿಲ್ಲ. ಮುಂದಿನ ಕ್ಷಣ ಗಾಡಿಯ ಚಕ್ರ ಅದರ ಮೇಲೆ ಹರಿದಿತ್ತು. ಅದು ಕರ್ಕಶವಾಗಿ ಚೀರುತ್ತಾ ಪ್ರಾಣ ಬಿಟ್ಟಿತು. ಅತ್ತ ಆ ಗಿಳಿಯ ಜೊತೆಗಾರರು ತಮ್ಮ ಓರ್ವ ಜೊತೆಗಾರ ಕಾಣೆಯಾಗಿದ್ದಾನೆಂದು ಅರಿತ ಬಳಿತ ಎಲ್ಲಾ ಗಿಳಿಗಳು ರಾಜ ಗಿಳಿಯ ಬಳಿಗೆ ಬಂದು "ಮಹಾರಾಜ, ನಿಮ್ಮ ಪ್ರಜೆಗಳಲ್ಲಿ ಒಂದು ಗಿಳಿ ನಿನ್ನೆ ರಾತ್ರಿಯಿಂದ ಕಾಣೆಯಾಗಿದೆ. ಅದರಿಂದ ನಮಗೆಲ್ಲರಿಗೂ ಬಹಳ ಚಿಂತೆಯಾಗಿದೆ" ಎಂದವು. ಆಗ ಗಿಳಿಗಳ ರಾಜನು "ಹೂಂ, ನನಗೂ ಸಹ ಬಹಳ ಚಿಂತೆಯಾಗಿದೆ. ನಾವೆಲ್ಲರೂ ಒಟ್ಟಾಗಿ ಹೋಗಿ ಆ ಕಾಡಿನ ಬಳಿ ಹುಡುಕೋಣ ನಡೆಯಿರಿ" ಎಂದನು. ನಂತರ ಅವರೆಲ್ಲರೂ ಕಾಡಿನ ರಸ್ತೆಯ ಬಳಿಗೆ ಬಂದರು. ರಸೆಯಲ್ಲಿ ಸತ್ತು ಬಿದ್ದಿದ್ದ ಗಿಳಿಯ ಶವವನ್ನು ಕಂಡು ಎಲ್ಲಾ ಗಿಳಿಗಳೂ "ಅಯ್ಯೋ ಇದೇನಾಯ್ತು? ಈ ಗಿಳಿ ನಮಗೆಲ್ಲಾ ಈ ಕಾಡಿನ ಕಡೆಗೆ ಹೋಗಬೇಡಿ, ಇಲ್ಲಿ ಬೇಟೆಗಾರರಿದ್ದಾರೆ ಎಂದು ಎಚ್ಚರಿಕೆ ನೀಡಿತ್ತು. ಆದರೆ ಸ್ವತಃ ಇಲ್ಲಿಗೆ ಬಂದು ಪ್ರಾಣ ಬಿಟ್ಟಿದೆಯಲ್ಲಾ" ಎಂದವು. ಅವುಗಳ ಮಾತಿಗೆ ಗಿಳಿಗಳ ರಾಜನು ನಿಟ್ಟುಸಿರು ಬಿಡುತ್ತಾ "ದುರಾಶೆ, ಸುಳ್ಳು ಮತ್ತು ಮೋಸದ ಪರಿಣಾಮ ಇದೇ ಆಗುತ್ತದೆ. ನನ್ನ ಪ್ರಜೆಗಳೇ, ಈ ಗಿಳಿ ದುರಾಸೆಗೆ ಒಳಗಾಗಿ ತನ್ನ ವಂಶದವರಿಗೇ ಮೋಸ ಮಾಡಿತು. ಸುಳ್ಳು ಹೇಳಿತು. ಅದರ ಪರಿಣಾಮ ನಿಮ್ಮೆಲ್ಲರ ಕಣ್ಣುಗಳ ಮುಂದೇ ಇದೆ. ಆದ್ದರಿಂದ ಎಲ್ಲರೂ ಮೋಸ, ಸುಳ್ಳು ಮತ್ತು ದುರಾಸೆಯಿಂದ ದೂರವಿರಬೇಕೆಂದು ಪಾಠ ಕಲಿತುಕೊಳ್ಳಿ" ಎಂದು ಹೇಳಿತು.

ನೀತಿ – ದುರಾಸೆಯಿಂದ ಮಾಡಿದ ಸಂಪತ್ತು ಮತ್ತು ಕೆಲಸಗಳು ಒಳ್ಳೆಯ ಪರಿಣಾಮವನ್ನು ನೀಡುವುದಿಲ್ಲ.

sumashri.com

## ಸುಭಾಷಿತ

**ನ ಚೋರಹಾರ್ಯಂ ನ ಚ ರಾಜಹಾರ್ಯಂ ನ ಭ್ರಾತೃಭಾಜ್ಯಂ ನ ಚ ಭಾರಕಾರೀ।**
**ವ್ಯಯೇ ಕೃತೇ ವರ್ಧತ ಏವ ನಿತ್ಯಂ ವಿದ್ಯಾಧನಂ ಸರ್ವಧನಾತ್ ಪ್ರಧಾನಂ ।।**

ಅರ್ಥ – ಯಾವುದೇ ಕಳ್ಳರಿಂದಲೂ ಕದಿಯಲಾಗದ, ರಾಜ ಮಹಾರಾಜರುಗಳಿಂದ ಕಿತ್ತುಕೊಳ್ಳಲಾಗದ, ಸಹೋದರರಿಂದ ಭಾಗವಾಗಿ ತೆಗೆದುಕೊಳ್ಳಲಾಗದ, ಎಷ್ಟಿದ್ದರೂ ಭಾರವೆನಿಸದ ಮತ್ತು ಖರ್ಚು ಮಾಡಿದಷ್ಟೂ ಹೆಚ್ಚಾಗುವ ಸಂಪತ್ತು ಎಂದರೆ ವಿದ್ಯೆ. ಈ ವಿದ್ಯೆಯೆಂಬ ಸಂಪತ್ತು ಎಲ್ಲ ಸಂಪತ್ತುಗಳಿಗಿಂತ ಮಹತ್ವದ್ದಾಗಿದೆ.

## ಉತ್ತರಗಳು

1. ಧೃತರಾಷ್ಟ್ರನ ಏಕಮಾತ್ರ ಪುತ್ರಿಯ ಹೆಸರು ದುಶ್ಶಲಾ.
2. ನಲಂದಾ ವಿಶ್ವವಿದ್ಯಾಲಯಕ್ಕಾಗಿ ಪ್ರಖ್ಯಾತವಾಗಿದೆ.
3. ಮಹಾತ್ಮ ಬುದ್ಧ ಕಪಿಲವಸ್ತುವಿನಲ್ಲಿ ಜನಿಸಿದನು.
4. ಮಂಗಳೂರಿನ ಸಂಸ್ಕೃತ ಹೆಸರು ಮಂಗಳಾಪುರಮ್.
5. ಭಾರತದ ಅತ್ಯುನ್ನತ ಪರ್ವತಶಿಖರ ಕಾಂಚನಚುಂಗಾ.
6. ಋಗ್ವೇದದಲ್ಲಿ ಎಂಟು ಅಷ್ಟಕಗಳಿವೆ.
7. ಶಿವನಿಂದ ವರ ಪಡೆದ ಮೂರುಮಂದಿ ರಕ್ಕಸರು ಭಸ್ಮಾಸುರ, ಹಿರಣ್ಯಕಶಿಪು ಮತ್ತು ರಾವಣ.
8. ಬ್ರಹ್ಮನ ವಾಹನ ಹಂಸ.
9. ಪಂಚಗವ್ಯಗಳು ಹಾಲು, ಮೊಸರು, ತುಪ್ಪ, ಗೋಮೂತ್ರ ಮತ್ತು ಗೋಮಯ.
10. ಸೊನ್ನೆಯ ಮೂಲ ಹೆಸರು ಶೂನ್ಯ.

sumashri.com

## ರಸಪ್ರಶ್ನೆಗಳು

1. ಯಮನ ಸಹೋದರಿಯ ಹೆಸರೇನು?
2. ಮಹಾವಿಷ್ಣುವಿನ ಚಕ್ರದ ಹೆಸರೇನು?
3. ಎರಡು ವಿಧವಾದ ಪಕ್ಷಗಳು ಯಾವುವು?
4. ಚಂದ್ರನಿಗೆ ಪ್ರಿಯವಾದ ಸಮಿಧೆ ಯಾವುದು?
5. ವಸಂತ ಋತುವು ಯಾವ ಮಾಸಗಳನ್ನು ಒಳಗೊಂಡಿದೆ?
6. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ನಕ್ಷತ್ರಗಳ ಸಂಖ್ಯೆ ಎಷ್ಟು?
7. ಸತ್ಯಹರಿಶ್ಚಂದ್ರನ ಮಗನ ಹೆಸರೇನು?
8. ಅಷ್ಟಾಂಗಯೋಗದ ಕೊನೆಯ ಹಂತ ಯಾವುದು?
9. ನವರಾತ್ರಿ ಯಾವ ಮಾಸದಲ್ಲಿ ಬರುತ್ತದೆ?
10. ಪಂಚಲೋಹಗಳು ಯಾವುವು?

